# 7903

Register Number | | | | | |

## Language — KANNADA — Paper I

### ( Prose and Poetry )

Time Allowed : 2 $\frac{1}{2}$ Hours ] [ Maximum Marks : 100

I. ಈ ಕೆಳಗಿನವುಗಳಲ್ಲಿ ಯಾವುದಾದರೂ ಎಂಟು ಪ್ರಶ್ನೆಗಳಿಗೆ (ಪ್ರತಿಯೊಂದಕ್ಕೂ ಮೂರು ಸಾಲುಗಳಿಗೆ ಮೀರದಂತೆ) ಉತ್ತರಿಸಿ :

$8 \times 2 = 16$

1) ಷೇಕ್ಸ್‌ಪಿಯರನ ಜನ್ಮ ದಿನೋತ್ಸವವನ್ನು ಎಲ್ಲಿ, ಯಾವಾಗ ಆಚರಿಸಲಾಗುತ್ತದೆ ?

2) ಕೆರೆಗೆ ಯಾರನ್ನು ಹಾರ ಕೊಡಬೇಕೆಂದು ನಿಷ್ಕರ್ಷೆಯಾಯಿತು ?

3) ತಿರುಕ್ಕುರಳನ್ನು ತಮಿಳುನಾಡಿನ ಜನರು ಏನೆಂದು ಕರೆಯುತ್ತಾರೆ ?

4) ಮನೆಗೆ ಬಂದ ಅತಿಥಿಗಳ ಮಕ್ಕಳು ಹೇಗಿದ್ದರು ?

5) ಕೈಕೆಯು ಕೋಪಗೃಹವನ್ನು ಪ್ರವೇಶಿಸಲು ಕಾರಣವೇನು ?

6) ಅಯ್ಯಂಗಾರರು ಕಮಲಪುರದ ಹೋಟೆಲನ್ನು ಹೇಗೆ ಸ್ಥಾಪಿಸಿದರು ?

7) ವ್ಯಾಸಂಗದ ಹವ್ಯಾಸ ಅತಿಯಾದರೆ ಅದರ ಪರಿಣಾಮವೇನು ?

8) ಧೈರ್ಯದ ಬಗ್ಗೆ ಗಾಂಧೀಜಿ ಏನು ಹೇಳಿದರು ?

9) ಮೊಸಳೆಯು ತನ್ನ ಪತ್ನಿಯಲ್ಲಿ ವಾನರನ ಬಗ್ಗೆ ಏನು ಹೇಳಿತು ?

10) ರವೀಂದ್ರರ ಬಾಲ್ಯದ ಬಗ್ಗೆ ತಿಳಿಸಿ.

II. ಈ ಕೆಳಗಿನವುಗಳಲ್ಲಿ ಯಾವುದಾದರೂ ಮೂರು ಪ್ರಶ್ನೆಗಳಿಗೆ (ಪ್ರತಿಯೊಂದಕ್ಕೂ ಆರು ಸಾಲುಗಳಿಗೆ ಮೀರದಂತೆ) ಉತ್ತರಿಸಿ :

$3 \times 5 = 15$

1) ಷೇಕ್ಸ್‌ಪಿಯರ್‌ನ ಬಾಲ್ಯವನ್ನು ವಿವರಿಸಿ.

2) ಗೃಹಸ್ಥ ಧರ್ಮವನ್ನು ಕುರಿತು ತಿರುವಳ್ಳುವರರ ಅಭಿಪ್ರಾಯವೇನು ? ವಿವರಿಸಿ.

3) ಕೈಕೆಯ ವರ್ತನೆಯಿಂದ ದಶರಥನ ಮೇಲಾದ ಪರಿಣಾಮವೇನು ?

4) ಗುಂಡಾಚಾರ್ಯರ ನಿಜವಾದ ವ್ಯಕ್ತಿತ್ವವೇನು ?

5) ಗಾಂಧೀಜಿಯವರ ಸಾಧನೆಗಳನ್ನು ಉದಾಹರಣೆಗಳ ಮೂಲಕ ತಿಳಿಸಿ.

[ Turn over

III. ಈ ಕೆಳಗಿನವುಗಳಲ್ಲಿ ಯಾವುದಾದರೂ ಒಂದಕ್ಕೆ ( 15 ಸಾಲುಗಳಿಗೆ ಮೀರದಂತೆ) ಉತ್ತರಿಸಿ : 1 × 7 = 7

1) ರವೀಂದ್ರರು ಸ್ಥಾಪಿಸಿದ ಸಂಸ್ಥೆಗಳಾವುವು ? ಅವುಗಳ ಕೆಲಸ ಕಾರ್ಯಗಳೇನು ?

2) ಕಪಿ ಮೊಸಳೆಯ ಗೆಳೆತನವನ್ನು ಏಕೆ ಬಿಟ್ಟಿತು ? ವಿವರಿಸಿ.

3) ವ್ಯಾಸಂಗದಿಂದ ದೊರೆಯುವ ಸುಖವನ್ನು ವಿವರಿಸಿ.

4) ಸೀತಮ್ಮನ ಉಪಚಾರದ ಮಾತುಗಳನ್ನು ಸಂಗ್ರಹಿಸಿ ಬರೆಯಿರಿ.

IV. ಈ ಎಲ್ಲಾ ಪ್ರಶ್ನೆಗಳಿಗೂ ಸರಿಯಾದ ಉತ್ತರವನ್ನು ಆರಿಸಿ ಬರೆಯಿರಿ : 5 × 1 = 5

1) ಷೇಕ್ಸ್‌ಪಿಯರನ ಕಾಲದಲ್ಲಿ ಸ್ಟ್ರಾಥರ್ಡ್ ಅಪಾನ್ ಏವನ್ ಒಂದು

ಅ) ಪಟ್ಟಣ

ಆ) ರಾಜಧಾನಿ

ಇ) ಹಳ್ಳಿ

2) ರವೀಂದ್ರನಾಥ ಠಾಗೋರರು ....................ರಲ್ಲಿ ಜನಿಸಿದರು.

ಅ) 1861

ಆ) 1850

ಇ) 1865

3) ಟ್ರಿನಿಟಿ ಎಂಬುದು

ಅ) ದೇವಸ್ಥಾನ

ಆ) ಮಸೀದಿ

ಇ) ಚರ್ಚ್

4) 'ವಾಜಿ' ಎಂಬ ಪದದ ಅರ್ಥ

ಅ) ಕುದುರೆ

ಆ) ಆನೆ

ಇ) ಒಂಟೆ

5) ಷಟ್ಪದಿಯ ಬ್ರಹ್ಮ

ಅ) ಹರಿಹರ

ಆ) ರಾಘವಾಂಕ

ಇ) ನಾಗಚಂದ್ರ

V. ಈ ಕೆಳಗಿನವುಗಳಲ್ಲಿ ಯಾವುದಾದರೂ ಒಂದನ್ನು ಕುರಿತು ಎರಡು ಪುಟಗಳಷ್ಟು ಪ್ರಬಂಧವನ್ನು ಬರೆಯಿರಿ : 1 × 10 = 10

1) ತಿರುವಳ್ಳುವರ್

2) ಕಪಿ ಮತ್ತು ಮೊಸಳೆಯ ಕಥೆ

3) ಷೇಕ್ಸ್‌ಪಿಯರನ ನೆನಪುಗಳ ನಡುವೆ

VI. ಈ ಕೆಳಗಿನ ಪ್ರಶ್ನೆಗಳಲ್ಲಿ ಯಾವುದಾದರೂ ಐದಕ್ಕೆ (ಪ್ರತಿಯೊಂದಕ್ಕೂ ಮೂರು ಸಾಲುಗಳಿಗೆ ಮೀರದಂತೆ) ಉತ್ತರಿಸಿ : 5 × 2 = 10

1) ಹುಡುಗಿ ಕುರಿಮರಿಯನ್ನು ಹೇಗೆ ಸಂತೈಸುತ್ತಿದ್ದಳು ?

2) ಗತವರ್ಷವನ್ನು ಹೇಗೆ ಮರೆಯಬೇಕೆಂದು ಕವಿ ಹೇಳಿದ್ದಾರೆ ?

3) ರತ್ನನಿಗೆ ಬಹಳ ಇಷ್ಟರಾದವರು ಯಾರ್‍ಯಾರು ?

4) ತಾಯಿಗೆ ಹೇಗೆ ಜ್ಞಾನೋದಯವಾಯಿತು ?

5) ಯಾವಾಗ ಕೈಲಾಸ ನೆರಮನೆಯಾಗುವುದು ?

6) ಎಂಥವರು ಯಾತ್ರೆಯನ್ನು ಮಾಡಿದರೆ ನಿರರ್ಥಕವಾಗುತ್ತದೆ ?

7) ಬಭ್ರುವಾಹನನು ಚಿತ್ರಾಂಗದೆಗೆ ನೀಡಿದ ಉತ್ತರವೇನು ?

VII. ಈ ಕೆಳಗಿನ ಪದ್ಯಭಾಗಗಳನ್ನು ಪೂರ್ತಿ ಮಾಡಿ : 2 × 5 = 10

1) ಪಡುವಣದ ಶಕ್ತಿಯಲಿ ........................................

........................................................................

........................................................................

.......................................... ಸೀಮೆಯನು ದಾಟಿ.

2) ಬೇವು ಬೆಲ್ಲ ................................................

........................................................................

........................................................................

.......................................... ನೆನೆದರೆಯೇನು ಫಲ.

VIII. ಈ ಕೆಳಗಿನ ಪ್ರಶ್ನೆಗಳಲ್ಲಿ ಯಾವುದಾದರೂ ಮೂರಕ್ಕೆ (ಪ್ರತಿಯೊಂದಕ್ಕೂ 6 ಸಾಲುಗಳು ಮೀರದಂತೆ) ಉತ್ತರಿಸಿ : 3 × 5 = 15

1) ದುರ್ಯೋಧನನು ತನ್ನ ಬಗ್ಗೆ ಅಸಹ್ಯಪಟ್ಟುಕೊಳ್ಳಲು ಕಾರಣವೇನು ?

2) ಅರ್ಜುನನು ಬಭ್ರುವಾಹನನನ್ನು ಏನೆಂದು ಮೂದಲಿಸಿದನು ? ವಿವರಿಸಿ.

3) ನಿಜವಾದ ಭಕ್ತಿ ಯಾವುದೆಂದು ಪುರಂದರದಾಸರು ತಿಳಿಸಿದ್ದಾರೆ ?

4) ಮದುವೆಯ ಬಗ್ಗೆ ಕವಿ ಹಾಗೂ ಅವರ ತಾಯಿಯಲ್ಲಿ ಇದ್ದ ಅಭಿಪ್ರಾಯ ಬೇಧವೇನು ? ವಿವರಿಸಿ.

5) ಕುರಿಮರಿ ಮತ್ತು ಹುಡುಗಿಯ ಮಧ್ಯೆ ಬೆಳೆದ ಆತ್ಮೀಯ ಸಂಬಂಧವನ್ನು ಕುರಿತು ಬರೆಯಿರಿ.

IX. ಈ ಕೆಳಗಿನ ಎಲ್ಲಾ ಪ್ರಶ್ನೆಗಳಿಗೂ ಸರಿಯಾದ ಉತ್ತರವನ್ನು ಆರಿಸಿ ಬರೆಯಿರಿ : $5 \times 1 = 5$

1) 'ನಯನ' ಪದದ ಅರ್ಥ

ಅ) ಹೃದಯ

ಆ) ಕಣ್ಣು

ಇ) ಕಿವಿ

2) 'ಮೌನ' ಎಂಬ ಪದದ ತದ್ಭವ ರೂಪ

ಅ) ಮರಣ

ಆ) ಮಾನ

ಇ) ಮಿಣ್ಣ

3) 'ನಾಗರಿಕ' ಎಂಬ ಪದದ ವಿರುದ್ಧಾರ್ಥ ಪದ

ಅ) ಅನಾಗರಿಕ

ಆ) ಸನಾಗರಿಕ

ಇ) ಬೆನಾಗರಿಕ

4) 'ಸುರಾಸುರ' ಎಂಬುದು ಯಾವ ಸಂಧಿ ?

ಅ) ಲೋಪ ಸಂಧಿ

ಆ) ಯಣ್ ಸಂಧಿ

ಇ) ಸವರ್ಣದೀರ್ಘ ಸಂಧಿ

5) 'ಕಣ್ಮುಚ್ಚಿ' ಎಂಬುದು ಯಾವ ಸಮಾಸ ?

ಅ) ತತ್ಪುರುಷ

ಆ) ಕ್ರಿಯಾ

ಇ) ದ್ವಂದ್ವ

X. ಈ ಕೆಳಗಿನ ಪ್ರಶ್ನೆಗಳಲ್ಲಿ ಯಾವುದಾದರೂ ಒಂದಕ್ಕೆ (15 ಸಾಲುಗಳು ಮೀರದಂತೆ) ಉತ್ತರಿಸಿ : $1 \times 7 = 7$

1) ಆತ್ಮಸಾಧನೆ ಎಲ್ಲರಿಗೂ ಅತ್ಯವಶ್ಯ ಎಂಬುದನ್ನು ಅಲ್ಲಮನು ಹೇಗೆ ವಿವರಿಸಿದ್ದಾನೆ ?

2) ದುರ್ಯೋಧನನ ವಿಲಾಪ ಕವಿತೆಯ ಸಾರಾಂಶವನ್ನು ಬರೆಯಿರಿ.

3) ಬಭ್ರುವಾಹನ ಮತ್ತು ಚಿತ್ರಾಂಗದೆಯರೊಳಗೆ ನಡೆದ ಸಂವಾದವನ್ನು ವಿವರಿಸಿ.